

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **30–03–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಬ್ಬ ಸಹಾಬಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲ. ಇವರು ಹಝ್ರತ್ ಅಬ್ದುಲ್ಲಾಹಿಬ್ನು ಅಮರ್ ಬಿನ್ ಹರಾಮ್‌ರವರ ಪುತ್ರರಾಗಿದ್ದರು. ಅಬ್ದುಲ್ಲಾ ಬಿನ್ ಅಮರ್ ಬಿನ್ ಹರಾಮ್ ಎಂಬ ಸಹಾಬಿಯ ಬಗ್ಗೆ ಕೆಲವು ವಾರಗಳ ಹಿಂದೆ ನಾನು ಪ್ರಸ್ತಾಪಿಸಿದ್ದೆ. ಅವರು ಶಹೀದರಾದ ನಂತರ ಅವರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು: ಅಲ್ಲಾಹನು ಅಬ್ದುಲ್ಲಾರೊಂದಿಗೆ ಪರಲೋಕದಲ್ಲಿ ಕೇಳಿದನು: ನಿನಗಿರುವ ಆಶೆ ಏನು? ನೀನು ನಿನ್ನ ಆಶೆಯನ್ನು ಹೇಳಿದರೆ ನಾನು ಈಡೇರಿಸಿಕೊಡುವೆನು. ಆಗ ಅಬ್ದುಲ್ಲಾ ಹೇಳಿದರು: ಓ ಅಲ್ಲಾಹ್, ನನ್ನ ಆಶೆ ನಾನು ಪುನಃ ಜೀವಂತಗೊಳಿಸಲ್ಪಟ್ಟು ಭೂಮಿಗೆ ಕಳುಹಿಸಲ್ಪಡಬೇಕೆಂದು ಮತ್ತು ಅನಂತರ ನಿನ್ನ ಮಾರ್ಗದಲ್ಲಿ ಶಹೀದನಾಗಬೇಕೆಂದಾಗಿದೆ. ಅಲ್ಲಾಹನು ಹೇಳಿದನು: ಇದು ಸಾಧ್ಯವಾಗಲಾರದು. ಏಕೆಂದರೆ ಮೃತರಾದವರನ್ನು ಜೀವಂತಗೊಳಿಸಿ ಭೂಮಿಗೆ ಕಳುಹಿಸಲಾಗುವುದಿಲ್ಲ. ಇದರಿಂದ ಅಬ್ದುಲ್ಲಾರವರ ಬಲಿದಾನದ ಮಟ್ಟ ಮತ್ತು ಅಲ್ಲಾಹನು ಅವರೊಂದಿಗೆ ಅಸಾಧಾರಣವಾದ ರೀತಿಯಲ್ಲಿ ವರ್ತಿಸಿದ ಬಗ್ಗೆ ನಮಗೆ ತಿಳಿಯುತ್ತದೆ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಬಾಲ್ಯಕಾಲದಲ್ಲಿಯೇ ಬೈಅತೆ ಅಖಬ ಸಾನಿಯದ ಸಂದರ್ಭದಲ್ಲಿ ಬೈಅತ್ ಮಾಡಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಅಮರ್ ಬಿನ್ ಹರಾಮ್ ತನ್ನ ಪುತ್ರ ಅಬ್ದುಲ್ಲಾರೊಂದಿಗೆ ಹೇಳಿದ್ದರು, ನಾನು ಯಹೂದಿಯಿಂದ ಪಡೆದ ಸಾಲದ ಹಣವನ್ನು ನನ್ನ ತೋಟದ ಹಣ್ಣುಗಳನ್ನು ಮಾರಾಟಮಾಡಿ ಯಹೂದಿಗೆ ಪಾವತಿಸಬೇಕು ಎಂದು. ಅವರು ತನ್ನ ತಂದೆಯ ಸಾಲ ತೀರಿಸಿದರು. ಆ ಕಾಲಘಟ್ಟದಲ್ಲಿ ತೋಟಗಳಲ್ಲಿರುವ ಹಣ್ಣುಗಳ ಫಸಲನ್ನು ಅವಲಂಬಿಸಿ ಸಾಲ ಪಡೆಯುವ ರೂಢಿ ಇತ್ತು. ಹಝ್ರತ್ ಜಾಬಿರ್ ಸಹ ತನ್ನ ಖರ್ಚು ವೆಚ್ಚಗಳಿಗೋಸ್ಕರ ಸಾಲ ಪಡೆಯುತ್ತಿದ್ದರು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ವರದಿ ಮಾಡುತ್ತಾರೆ: ಮದೀನದ ಒಬ್ಬ ಯಹೂದಿ ನನ್ನ ಖರ್ಜೂರದ ತೋಟದ ಹೊಸ ಬೆಳೆ ಹಣ್ಣಾಗುವ ತನಕ ನನಗೆ ಸಾಲ ಕೊಡುತ್ತಿದ್ದನು. ಒಂದು ಸಲ ಹಣ್ಣಿನ ಫಸಲು ಕಡಿಮೆಯಾಗಿತ್ತು. ಯಹೂದಿ ರೂಢಿ ಪ್ರಕಾರ ತನ್ನ ಸಾಲದ ವಸೂಲಿಗೆ ಬಂದನು. ನಾನು ಅವನೊಂದಿಗೆ ಇನ್ನೊಂದು ವರ್ಷದ ತನಕ ಸಾಲ ಮರುಪಾವತಿಗೆ ಕಾಲಾವಕಾಶವನ್ನು ಕೇಳಿದೆನು. ಆದರೆ ಯಹೂದಿ ನಿರಾಕರಿಸಿದ. ಈ ವಿಷಯ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಾಗ ಅವರು ಸಹಾಬರೊಂದಿಗೆ ಹೇಳಿದರು: ನಾವು ಹೋಗಿ ಆ ಯಹೂದಿಯೊಂದಿಗೆ ಜಾಬಿರ್‌ಗೋಸ್ಕರ ಕಾಲಾವಕಾಶವನ್ನು ಅಪೇಕ್ಷಿಸೋಣ. ಹಾಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೆಲವು ಸಹಾಬರೊಂದಿಗೆ ನನ್ನ ತೋಟಕ್ಕೆ ಆಗಮಿಸಿದರು ಮತ್ತು ಯಹೂದಿಯೊಂದಿಗೆ ಮಾತನಾಡಿದರು. ಆದರೆ ಯಹೂದಿ 'ಓ ಅಬುಲ್ ಖಾಸಿಮ್ ನಾನು ಅವನಿಗೆ ಸಮಯಾವಕಾಶ ನೀಡಲಾರೆ' ಎಂದು ಹೇಳಿದನು. ಯಹೂದಿಯ ಈ ವರ್ತನೆಯನ್ನು ನೋಡಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖರ್ಜೂರದ ಮರಗಳ ಸುತ್ತಲೂ ತಿರುಗಾಡಿ ಮರಳಿ ಬಂದು ಯಹೂದಿಯೊಂದಿಗೆ ಪುನಃ ಮಾತನಾಡಿದರು. ಆದರೆ ಯಹೂದಿ ಅವರ ಮಾತನ್ನು ಪುನಃ ತಿರಸ್ಕರಿಸಿದನು. ಹಝ್ರತ್ ಜಾಬಿರ್ ಹೇಳುತ್ತಾರೆ: ಆ ಸಂದರ್ಭದಲ್ಲಿ ನಾನು ಖರ್ಜೂರದ ಕೆಲವು ಹಣ್ಣುಗಳನ್ನು ಕೊಯ್ದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿನ್ನಲು ನೀಡಿದೆ. ಅವರು ಖರ್ಜೂರ ತಿಂದ ನಂತರ ಹೇಳಿದರು: ನಿಮ್ಮ ತೋಟಗಳಲ್ಲಿ ಚಪ್ಪರವಿರುತ್ತದೆ ಅದು ಎಲ್ಲಿದೆ? ನಾನು ಅದೆಲ್ಲಿದೆ ಎಂದು ಹೇಳಿದಾಗ ಅವರು ಹೇಳಿದರು: ಅಲ್ಲಿ ಚಾಪೆ ಹಾಸಿರಿ. ಅಲ್ಲಿ ನಾನು ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯುವೆನು. ನಾನು ಅಲ್ಲಿ ಚಾಪೆ ಹಾಸಿದಾಗ ಅಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿದ್ರಿಸಿದರು. ಅವರು ನಿದ್ರೆಯಿಂದ ಎಚ್ಚರಗೊಂಡಾಗ ನಾನು ಪುನಃ ಅವರಿಗೆ ಒಂದು ಮುಷ್ಠಿ ತುಂಬಾ ಖರ್ಜೂರ ನೀಡಿದೆನು. ಅವರು ಅದರಿಂದ ಸ್ವಲ್ಪ ಖರ್ಜೂರ ತಿಂದರು. ಅನಂತರ ಎದ್ದು ನಿಂತು ಯಹೂದಿಯೊಂದಿಗೆ ಪುನಃ ಮಾತನಾಡಿದಾಗ ಅವರ ಮಾತನ್ನು ಯಹೂದಿ ಅಂಗೀಕರಿಸಲಿಲ್ಲ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪುನಃ ತೋಟದೊಳಗೆ ಸುತ್ತಾಡಿದರು. ಅನಂತರ ನನ್ನೊಂದಿಗೆ ಹೇಳಿದರು: ಜಾಬಿರ್, ಖರ್ಜೂರದ ಹಣ್ಣು ಕೊಯ್ಯಲು ಪ್ರಾರಂಭಿಸು ಮತ್ತು ಯಹೂದಿಯ ಸಾಲವನ್ನು ತೀರಿಸು. ನಾನು ಖರ್ಜೂರದ ಹಣ್ಣುಗಳನ್ನು ಕೊಯ್ಯಲು ಪ್ರಾರಂಭಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖರ್ಜೂರದ ಮರಗಳ ಮಧ್ಯೆ ನಿಂತಿದ್ದರು. ನಾನು ಖರ್ಜೂರದ ಹಣ್ಣುಗಳನ್ನು ಕೊಯ್ದು ಯಹೂದಿಯ ಸಾಲ ಸಂಪೂರ್ಣವಾಗಿ ಮರುಪಾವತಿ ಮಾಡಿದೆ. ಯಹೂದಿಯ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ ನಂತರ ಸಹ ಸ್ವಲ್ಪ ಖರ್ಜೂರ ಬಾಕಿಯಾಗಿ ಉಳಿದಿತ್ತು. ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಈ ಶುಭ

ಸಮಾಚಾರ ಹೇಳಿದಾಗ ಅವರು ಹೇಳಿದರು: ನಾನು ಅಲ್ಲಾಹನ ಸಂದೇಶವಾಹಕನೆಂದು ಸಾಕ್ಷ್ಯ ಹೇಳುತ್ತೇನೆ.

ಈ ಘಟನೆಯಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಹಾಬರೊಂದಿಗೆಯಿದ್ದ ಪ್ರೀತಿ ವಾತ್ಸಲ್ಯಗಳು ಪ್ರಕಟವಾಗುತ್ತವೆಯಲ್ಲದೆ ಅವರ ಪ್ರಾರ್ಥನೆಯ ಫಲ ಸ್ವರೂಪವಾಗಿ ಹಣ್ಣುಗಳಲ್ಲಿ ಅನುಗ್ರಹ ಉಂಟಾದುದನ್ನೂ ನಾವು ಕಾಣುತ್ತೇವೆ. ಅದರೊಂದಿಗೆ ಸಾಲವನ್ನು ಮರುಪಾವತಿ ಮಾಡುವ ಬಗ್ಗೆ ಸಹಾಬರಿಗಿದ್ದ ಕಾಳಜಿ ಸಹ ವ್ಯಕ್ತವಾಗುತ್ತದೆ. ವಾಸ್ತವಿಕವಾಗಿ ಸತ್ಯ ವಿಶ್ವಾಸಿಯಾದವನಲ್ಲಿ ಈ ವೈಶಿಷ್ಟ್ಯವಿರಬೇಕಾದುದು ಆವಶ್ಯಕವಾಗಿದೆ. ಕೆಲವರು ತಾವು ಅಹ್ಮದಿಗಳೆಂದು ಹೇಳಿಕೊಳ್ಳುತ್ತಾರಾದರೂ ಅದರ ಬಗ್ಗೆ ಚಿಂತಿಸುವುದಿಲ್ಲ. ಸಾಲ ತೀರಿಸುವುದಕ್ಕೆ ಸಂಬಂಧಿಸಿ ನೆವನಗಳನ್ನು ಹೇಳುತ್ತಾರೆ. ಸಾಲ ಮರುಪಾವತಿ ಮಾಡುವುದಿಲ್ಲ. ಅನೇಕ ವರ್ಷಗಳ ಕಾಲ ಮೊಕದ್ದಮೆ ಜಾರಿಯಲ್ಲಿರುತ್ತದೆ. ನಾವು ಯಾವಾಗಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ನೆನಪಿನಲ್ಲಿಡಬೇಕಾಗಿದೆ. ಅವರು ಹೇಳಿದರು: ನನ್ನನ್ನು ಬೈಅತ್ ಮಾಡಿದ ನಂತರ ಸಹಾಬರ ಉದಾಹರಣೆಗಳನ್ನು ನಿಮ್ಮಲ್ಲಿ ಅಳವಡಿಸಿಕೊಳ್ಳಿರಿ. ಹೀಗೆ ಮಾಡಿದರೆ ಮಾತ್ರ ಎಂತಹ ಸುಂದರ ಸಮಾಜದ ನಿರ್ಮಾಣವಾಗುವುದೆಂದರೆ ಅದು ಮಹದೀ ಮಸೀಹರ ಆಗಮನದ ನಂತರ ಸ್ಥಾಪಿತವಾಗುವುದಾಗಿತ್ತು.

ಸಾಲವನ್ನು ಮರುಪಾವತಿ ಮಾಡುವುದರ ಮಹತ್ವದ ಬಗ್ಗೆ ಒಂದು ಹದೀಸು ಹಝ್ರತ್ ಜಾಬಿರ್‌ರಿಂದ ಹೀಗೆ ವರದಿಯಾಗಿದೆ: ಒಬ್ಬ ಸಹಾಬಿ ಎರಡು ದೀನಾರ್‌ಗಳನ್ನು ಸಾಲವಾಗಿ ಪಡೆದಿದ್ದರು. ಅದನ್ನು ಮರುಪಾವತಿ ಮಾಡುವ ಮೊದಲು ಅವರು ನಿಧನ ಹೊಂದಿದರು. ಆ ಸಹಾಬಿಯ ಜನಾಝು ನಮಾಝ್ ನಿರ್ವಹಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿರಾಕರಿಸಿದರು. ಆಗ ಇನ್ನೊಬ್ಬ ಸಹಾಬಿ ತಾನು ಆ ಸಾಲ ಮರುಪಾವತಿಯ ಹೊಣೆಗಾರಿಕೆ ವಹಿಸುತ್ತೇನೆ ಎಂದು ಹೇಳಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝೆ ಜನಾಝು ನಿರ್ವಹಿಸಿದರು. ಅನಂತರ ಮರುದಿನ ಸಾಲ ಮರುಪಾವತಿಯ ಜವಾಬ್ದಾರಿಯನ್ನು ಹೊತ್ತ ಸಹಾಬಿಯೊಂದಿಗೆ ವಿಚಾರಿಸಿದರು: ನೀವು ಸಾಲ ಮರುಪಾವತಿಯ ಹೊಣೆಗಾರಿಕೆಯನ್ನು ಈಡೇರಿಸಿರುವಿರೋ ಇಲ್ಲವೋ ಎಂದು.

ಸಾಲವನ್ನು ಮರುಪಾವತಿ ಮಾಡುವುದರ ಮಹತ್ವ ಆ ರೀತಿ ಇದೆ. ಸಾಲ ಮರುಪಾವತಿ ಬಗ್ಗೆ ಚಿಂತೆ ಇರಬೇಕು. ಹಝ್ರತ್ ಜಾಬಿರ್‌ರಿಂದ ಹೀಗೆ ಸಹ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಒಬ್ಬ ಸತ್ಯವಿಶ್ವಾಸಿ ಮೃತನಾದರೆ ಅವನ ಸಂಪತ್ತು ಅವನ ಕುಟುಂಬಕ್ಕೆ ಲಭಿಸುತ್ತದೆ. ಆದರೆ ಒಬ್ಬನು ಸಾಲವನ್ನು ಬಾಕಿಯಾಗಿಟ್ಟು ಮೃತನಾದರೆ ಅವನು ಭೂಸ್ವತ್ತು ಬಿಟ್ಟು ಹೋಗಿದ್ದರೂ ಅವನ ಸಾಲವನ್ನು ತೀರಿಸಲು ಅದು ಪರ್ಯಾಪ್ತವಾಗಿಲ್ಲವಾಗಿದ್ದರೆ ಅಥವಾ ಅನಾಥರಾದ ಮಕ್ಕಳನ್ನು ಅಗಲಿ ಹೋಗಿದ್ದರೆ ಅಂತಹ ವ್ಯಕ್ತಿಯ ಅನಾಥ ಮಕ್ಕಳ ಪೋಷಣೆ ಮತ್ತು ಸಾಲಮರುಪಾವತಿಯ ವ್ಯವಸ್ಥೆ ಆಡಳಿತಾಧಿಕಾರಿಗಳು ಮಾಡಬೇಕು. ಅನಾಥರ ಪಾಲನೆ ಪೋಷಣೆ ಬಗ್ಗೆ ಇಸ್ಲಾಮ್ ಬಹಳ ಹೆಚ್ಚು ಒತ್ತಿ ಹೇಳಿದೆ. ಎರಡು ವಿವಿಧ ಸನ್ನಿವೇಶಗಳನ್ನು ವಿವರಿಸಲಾಗಿದೆ. ಅನಾವಶ್ಯಕವಾಗಿ ಸಾಲವನ್ನು ಪಡೆಯುವವರಿಗೆ ಹೀಗೆ ಮನವರಿಕೆ ಮಾಡಿಕೊಡಲಾಗಿದೆ. ಸಾಲದ ಮರುಪಾವತಿ ಬಹಳ ಮಹತ್ವಪೂರ್ಣವಾಗಿದೆ. ಸಾಲಮರುಪಾವತಿ ಮಾಡದೆ ಮೃತನಾದವನ ಸಂಬಂಧಿಕರು ಅದರ ಮರುಪಾವತಿಯ ಹೊಣೆ ಹೊರಬೇಕಾಗಿದೆ. ಎರಡನೆಯದು ಮೃತನ ಅನಾಥ ಮಕ್ಕಳನ್ನು ಸಾಕುವ ಹೊಣೆಗಾರಿಕೆ ಸರಕಾರ ವಹಿಸಬೇಕು. ಅವನ ಸಾಲವನ್ನೂ ಮರುಪಾವತಿ ಮಾಡಬೇಕು. ಇವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಸ್ಲಾಮೀ ಸರಕಾರಗಳಿಗೆ ನೀಡಿರುವ ಮಾರ್ಗದರ್ಶಕಗಳಾಗಿವೆ. ಅವರು ತಮ್ಮ ಪ್ರಜೆಗಳ ಬಗ್ಗೆ ಕಾಳಜಿ ವಹಿಸಬೇಕು. ಅವರ ಬಗ್ಗೆ ಗಮನ ಹರಿಸಬೇಕು. ಆದರೆ ದುರದೃಷ್ಟಕರವಾಗಿ ಇಂದು ಪ್ರಜೆಗಳ ಹಕ್ಕುಗಳನ್ನು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಕಿತ್ತಿಕೊಳ್ಳುವುದು ಇಸ್ಲಾಮೀ ಸರಕಾರಗಳಾಗಿವೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಜಾಬಿರ್‌ರೊಂದಿಗೆ ಪ್ರೀತಿ ವಾತ್ಸಲ್ಯದಿಂದ ವರ್ತಿಸಿದ ಮತ್ತೊಂದು ಘಟನೆ ಸಹ ವರದಿಯಾಗಿದೆ. ವರದಿಗಾರ ಹೇಳುತ್ತಾರೆ: ನಾನು ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಅನ್‌ಸಾರಿಯೊಂದಿಗೆ ಹೇಳಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ತಾವು ಆಲಿಸಿರುವ ಏನನ್ನಾದರೂ ವಿವರಿಸಿರಿ. ಆಗ ಹಝ್ರತ್ ಜಾಬಿರ್ ಹೇಳಿದರು: ನಾನು ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಪ್ರಯಾಣ ಮಾಡುತ್ತಿದ್ದೆ. ನಾವು ಮದೀನದ ಕಡೆಗೆ ಮರಳಿ ಬಂದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ತಮ್ಮ ಮನೆಗಳಿಗೆ ಬೇಗನೆ ಹೋಗಲು ಇಚ್ಛಿಸುವವರು ಬೇಗನೆ ಹೋಗಬಹುದು. ಹಝ್ರತ್ ಜಾಬಿರ್ ಹೇಳುತ್ತಾರೆ: ನಾವು ಬೇಗ ಬೇಗನೆ ಮನೆಯ ಕಡೆ ಹೊರಟೆವು. ನಾನು ಒಂದು ಒಂಟೆಯನ್ನೇರಿದ್ದೆ. ಅದರ ಬಣ್ಣ ಖಾಕಿಯಾಗಿತ್ತು. ಯಾವುದೇ ಕಲೆ ಅದರ ಮೈ ಮೇಲಿರಲಿಲ್ಲ. ನಾನು ಸವಾರಿ ಮಾಡುತ್ತಾ ಇದ್ದಾಗ ಒಂಟೆ ಕೂಡಲೆ ನಿಂತುಬಿಟ್ಟಿತು. ನಾನು ಅದನ್ನು ಚಲಾಯಿಸಲು ಪ್ರಯತ್ನಿಸಿದೆನಾದರೂ ಅದು ಚಲಿಸಲಿಲ್ಲ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಬಳಿಗೆ ಬಂದು ಹೇಳಿದರು: ನೀನು ಒಂಟೆಯ ಮೇಲೆ ಕುಳಿತುಕೊಂಡು ಬಿಗಿಯಾಗಿ ಹಿಡಿದುಕೋ ಎಂದು ಹೇಳಿ ತನ್ನ ಚಾಟಿಯಿಂದ ಒಂದು ಹೊಡೆತ ನೀಡಿದರು. ಒಂಟೆ ನೆಗೆದು ಚಲಿಸಲು ತೊಡಗಿತು. ಅನಂತರ ಬಹಳ ವೇಗವಾಗಿ ಚಲಿಸತೊಡಗಿತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನೊಂದಿಗೆ ಕೇಳಿದರು: ನೀನು ಈ ಒಂಟೆಯನ್ನು ನನಗೆ ಮಾರಾಟ ಮಾಡುವಿಯೋ? ಹೌದು, ಮಾರುವೆನು ಎಂದು ನಾನು ಹೇಳಿದೆ.

ನಾವು ಮದೀನಕ್ಕೆ ತಲಪಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಅನೇಕ

ಸಹಾಬರೊಂದಿಗೆ ಮಸ್‌ಜಿದ್‌ಗೆ ಪ್ರವೇಶಿಸಿದರು. ನಾನು ಒಂಟೆಯನ್ನು ಮಸ್‌ಜಿದ್ ಹೊರಗೆ ಕಲ್ಲಿರುವ ಒಂದು ಸ್ಥಳದಲ್ಲಿ ಕಟ್ಟಿ ಮಸ್‌ಜಿದ್‌ಗೆ ಪ್ರವೇಶಿಸಿದೆ. ನಾನು ಹೇಳಿದೆ: ಇದು ತಮ್ಮ ಒಂಟೆ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸ್‌ಜಿದ್‌ನಿಂದ ಹೊರಗೆ ಬಂದು ಒಂಟೆಯ ಸುತ್ತುಮುತ್ತು ತಿರುಗಾಡಿದರು. ಈ ಒಂಟೆ ನಮ್ಮದು ಎಂದು ಹೇಳಿದರು. ಅವರು ಅನೇಕ ದೀನಾರುಗಳನ್ನು ಕಳುಹಿಸಿ 'ಇವುಗಳನ್ನು ಜಾಬಿರ್‌ಗೆ ಕೊಡಿರಿ' ಎಂದು ಹೇಳಿದರು. ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನೊಡನೆ ಕೇಳಿದರು: ನಿನಗೆ ನಿನ್ನ ಒಂಟೆಯ ಬೆಲೆ ಪೂರ್ಣವಾಗಿ ಲಭಿಸಿತೋ? ನಾನು ಹೇಳಿದೆ: ಹೌದು ನನಗೆ ಪೂರ್ಣವಾಗಿ ಲಭಿಸಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅದಕ್ಕೆ ನೀಡಿದ ಹಣ ಮತ್ತು ಈ ಒಂಟೆಯೂ ಸಹ ನಿನ್ನದೇ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರೀತಿ ವಾತ್ಸಲ್ಯ ಭರಿತರಾಗಿ ಒಂಟೆಯನ್ನೂ ಅದಕ್ಕೆ ಬೆಲೆಯಾಗಿ ನೀಡಿದ ಹಣವನ್ನೂ ಹಝ್ರತ್ ಜಾಬಿರ್‌ರವರಿಗೆ ನೀಡಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತನ್ನ ಸಹಾಬರೊಂದಿಗೆ ಮತ್ತು ಅವರ ಮಕ್ಕಳೊಂದಿಗೆ ಇದ್ದ ಪ್ರೀತಿವಾತ್ಸಲ್ಯ ಆ ರೀತಿ ಇತ್ತು. ಅಲ್ಲಾಹನು ಅವರ ಆಧ್ಯಾತ್ಮಿಕ ಪದವಿಗಳನ್ನು ಉನ್ನತ ಗೊಳಿಸಲಿ. ಅವರು ಮಾಡಿದ ಒಳಿತುಗಳನ್ನು ಜಾರಿಯಲ್ಲಿರಿಸಲು ನಮಗೆ ಸಹ ಅಲ್ಲಾಹನು ಭಾಗ್ಯ ದಯಪಾಲಿಸಲಿ – ಆಮೀನ್.

ಈಗ ನಾನು ಮೃತರಾದ ಇಬ್ಬರು ನಿಷ್ಠಾವಂತ ಅಹ್ಮದಿಯರ ಬಗ್ಗೆ ಸ್ಮರಿಸುವೆನು. ಅವರಲ್ಲೊಬ್ಬರು ಸಿರಿಯಾದ ಮುಕರ್ರಮ್ ಬಿಲಾಲ್ ಅದ್‌ಲಬಿ ಸಾಹಿಬ್. ಕೆಲವು ದಿನಗಳ ಹಿಂದೆ ಅವರು ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಅವರು ಮಾರ್ಚ್ ದಿನಾಂಕ 17ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಬಿಲಾಲ್ ಸಾಹಿಬರು 1978ರಲ್ಲಿ ಜನಿಸಿದರು. ಅವರ ಪ್ರಾಯ 17 ಆಗಿದ್ದಾಗ ಅವರು ಜಮಾಅತಿನ ಪರಿಚಯಗಳಿಸಿದರು. ಸ್ವಲ್ಪ ಸಮಯದ ನಂತರ ಅವರು ಬೈಅತ್ ಮಾಡಿದರು. ಸಿರಿಯಾದ ಸದರ್ ಜಮಾಅತ್ ಬರೆಯುತ್ತಾರೆ: ಬಿಲಾಲ್ ಸಾಹಿಬ್ ಸ್ಪೋರ್ಟ್ಸ್ ಗಾರ್ಮೆಂಟ್ಸ್ ಮಾರಾಟ ಮಾಡುವ ಮಳಿಗೆಯನ್ನು ಹೊಂದಿದ್ದರು. ಅವರು ಬಡಜನರಿಗೆ ನೆರವು ನೀಡುವವರಾಗಿದ್ದರು. ಬಹಳ ಧಾರ್ಮಿಕ ಅಭಿಮಾನ ಉಳ್ಳವರಾಗಿದ್ದರು. ಧರಿಸಲು ಸರಿಯಾದ ಬಟ್ಟೆಗಳಿಲ್ಲದ ಅಹ್ಮದಿಯರ ಸ್ಥಿತಿಯನ್ನು ಅವರಿಗೆ ನೋಡಲಾಗುತ್ತಿರಲಿಲ್ಲ. ಅವರಿಗೆ ತನ್ನ ಮಕ್ಕಳ ಬಗ್ಗೆ ಸಹ ಬಹಳ ಕಾಳಜಿ ಇತ್ತು. ಅವರನ್ನು ಅತ್ಯುತ್ತಮ ವಿದ್ಯಾಲಯಗಳಲ್ಲಿ ಪ್ರವೇಶಿಸಿದ್ದರು. ಅವರು ಕ್ರಮಬದ್ಧವಾಗಿ ಚಂದದ ಲೆಕ್ಕ ಮಾಡಿ ಪಾವತಿಸುತ್ತಿದ್ದರು. ಅವರು ಸಮಾಜ ಸೇವೆ ಮಾಡುವವರೂ ಆಗಿದ್ದರು. ನಮಾಝ್‌ಗಳನ್ನು ಮತ್ತು ಇತರ ಆರಾಧನೆಗಳನ್ನು ನಿಷ್ಠೆಯಿಂದ ನಿರ್ವಹಿಸುವವರಾಗಿದ್ದರು. ಖಿಲಾಫತ್‌ನೊಂದಿಗೆ ಅತ್ಯಂತ ಗಾಢ ಸಂಬಂಧ ಹೊಂದಿದ್ದರು. ಪ್ರತಿಯೊಂದು ಖುತ್‌ಬವನ್ನು ಆಲಿಸುತ್ತಿದ್ದರು. ಸದರ್ ಸಾಹಿಬ್ ಬರೆಯುತ್ತಾರೆ: ಖುತ್‌ಬದ ಸಾರಾಂಶವನ್ನು ಮುಂದಿನ ವಾರ ನಾನು ಓದಿ ಹೇಳುವಾಗ ಅವರು ಮುಖವನ್ನು ಮುಚ್ಚಿ ಅಳುತ್ತಿದ್ದರು ಮತ್ತು ಹೇಳುತ್ತಿದ್ದರು ಖಲೀಫರು ನನ್ನ ಬಗ್ಗೆ ಖುತ್‌ಬದಲ್ಲಿ ಹೇಳುತ್ತಿದ್ದಾರೆ ಅಥವಾ ನನ್ನೊಂದಿಗೆ ಖುತ್‌ಬದಲ್ಲಿ ಹೇಳುತ್ತಿದ್ದಾರೆ ಎಂದು. ಅವರು ಹನ್ನೊಂದು ವರ್ಷ ಪ್ರಾಯದ ಒಬ್ಬ ಪುತ್ರನನ್ನೂ ಹನ್ನೆರಡು ವರ್ಷ ಪ್ರಾಯದ ಒಬ್ಬ ಪುತ್ರಿಯನ್ನೂ ಅಗಲಿ ಹೋಗಿದ್ದಾರೆ.

ಇನ್ನೊಬ್ಬ ಮೃತರು ಸಲೀಮ ಮೀರ್ ಸಾಹಿಬ. ಅವರು ಕರಾಚಿಯ ಲಜ್‌ನ ಇಮಾಇಲ್ಲಾದ ಮಾಜಿ ಅಧ್ಯಕ್ಷೆಯಾಗಿದ್ದರು. ಅವರು ಮುಕರ್ರಮ್ ಅಬ್ದುಲ್ ಖಾದಿರ್ ಡಾರ್ ಸಾಹಿಬರ ಪತ್ನಿಯಾಗಿದ್ದರು. ಅವರು ಇದೇ ಮಾರ್ಚ್ ದಿನಾಂಕ 17ರಂದು ತನ್ನ 90ನೇ ವಯಸ್ಸು ಪ್ರಾಯದಲ್ಲಿ ನಿಧನ ಹೊಂದಿದರು– **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆ ಮೀರ್ ಇಲಾಹಿ ಬಕ್ಷ್ ಸಾಹಿಬ್ ಸಹಾಬಿಯಾಗಿದ್ದರು. ಅವರು ಪಾಕಿಸ್ಥಾನದ ಗುಜರಾತ್ ಜಿಲ್ಲೆಯ ಶೇಖ್‌ಪುರದವರಾಗಿದ್ದರು. 1904ರಲ್ಲಿ ಬೈಅತ್ ಮಾಡಿದ್ದರು. ಮೃತರ ತಾಯಿ ಮರ್‌ಯಮ್ ಬೇಗಮ್ ಸಾಹಿಬ ಖಾದಿಯಾನಿನ ಮದರಸತುಲ್ ಖವಾತೀನ್‌ನಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ಮೃತರಿಗೆ ಪವಿತ್ರ ಖುರ್‌ಆನ್ ಕಲಿಸುವ ಬಗ್ಗೆ ವಿಶಿಷ್ಟ ಆಸಕ್ತಿ ಇತ್ತು. ಅವರಿಗೆ ಲಜ್‌ನದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುವ ಭಾಗ್ಯ ಲಭಿಸಿತ್ತು. 1981ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರವರು ಅವರನ್ನು ಮುನ್‌ತಝಿಮ ಕಮಿಟಿಯ ಸದರ್ ಆಗಿ ನೇಮಿಸಿದ್ದರು. ಅವರು ಹೇಳಿದ್ದರು: ನನ್ನನ್ನು ಸದರ್ ಆಗಿ ನೇಮಿಸಿದಾಗ ನಾನು ಪ್ರಾರ್ಥಿಸಲು ತೊಡಗಿದೆ. ನಾನು ಅಳುತ್ತಾ ಅಲ್ಲಾಹನಿಂದ ನೆರವನ್ನು ಬೇಡಿದೆನು. ನಾನು ಕೆಲಸ ಮಾಡಲು ಪ್ರಾರಂಭಿಸಿದೆ. ಮಜ್ಲಿಸೆ ಆಮಿಲದ ಸಭೆಗಳನ್ನು ಬೇಗ ಬೇಗನೆ ಕರೆದೆನು. ಖಿಯಾದತ್‌ಗಳನ್ನು ಸಂದರ್ಶಿಸಿದೆ. ಅವರೆಲ್ಲರ ಮುಂದೆ ಅನುಸರಣೆ, ಸಂಘಟನೆಯೊಂದಿಗೆ ಸಂಬಂಧ ಸ್ಥಾಪನೆ, ಇಸ್ಲಾಮೀ ಸ್ವಭಾವಗುಣಗಳನ್ನು ತಮ್ಮಲ್ಲಿ ಅಳವಡಿಸುವುದು, ನವೀನಾಚರಣೆಗಳ ವಿರುದ್ಧ ಜಿಹಾದ್ ಮಾಡುವ ಬಗ್ಗೆ, ಅನಾವಶ್ಯಕ ಆಕ್ಷೇಪಗಳನ್ನು ಸಂಪೂರ್ಣವಾಗಿ ವರ್ಜಿಸುವುದು ಮೊದಲಾದವುಗಳ ಬಗ್ಗೆ ಒತ್ತಿ ಹೇಳಿದೆನು. 1986ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಅವರನ್ನು ಕರಾಚಿಯ ಲಜ್‌ನದ ಸದರ್ ಆಗಿ ನೇಮಿಸಿದರು. 1986 ರಿಂದ 1997ರ ತನಕ ಅವರು ಕರಾಚಿಯ ಲಜ್‌ನದ ಸದರ್ ಆಗಿ ತನ್ನ ಹೊಣೆಗಾರಿಕೆಗಳನ್ನು ನಿಭಾಯಿಸಿದರು. ಕರಾಚಿಯ ಲಜ್‌ನ ಅವರು ಸದರ್ ಆಗಿದ್ದ ಕಾಲಾವಧಿಯಲ್ಲಿ ಅರುವತ್ತು ಪುಸ್ತಕಗಳನ್ನು ಮತ್ತು ಎರಡು ಪತ್ರಿಕೆಗಳನ್ನು ಪ್ರಕಟಿಸಿತು. ಅವರು ಸದರ್ ಆಗಿದ್ದ ಕಾಲದಲ್ಲಿ ದಾಈ ಇಲಲ್ಲಾಹ್‌ಗೆ ಸಂಬಂಧಿಸಿದ ಕ್ಲಾಸ್ ಸಹ ಆರಂಭವಾಯಿತು. ಅದರ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಬಹಳ ಸಂತೋಷ ಪ್ರಕಟಿಸುತ್ತಾ ಹೇಳಿದರು: ನೀವು ಅಲ್ಲಾಹನ ಅನುಗ್ರಹದಿಂದ ಬಹಳ ಉತ್ತಮ ಕೆಲಸ ಮಾಡುತ್ತಿರುವಿರಿ. ನನ್ನ ಹೃದಯದಿಂದ ತಮಗೋಸ್ಕರ ಪ್ರಾರ್ಥನೆಗಳು ಏದ್ದೇಳುತ್ತಿವೆ. ಅಲ್ಲಾಹನು ನಿಮ್ಮ ಆಯುಸ್ಸು, ಆರೋಗ್ಯ ಮತ್ತು ಸಂತೋಷದಲ್ಲಿ ಅನುಗ್ರಹ ನೀಡಲಿ, ನಿಮ್ಮ ನಿಷ್ಠಾವಂತರಾದ ಸಂಗಡಿಗರಿಗೆ ಇಹಲೋಕದಲ್ಲೂ

ಪರಲೋಕದಲ್ಲೂ ಅತ್ಯುತ್ತಮ ಪ್ರತಿಫಲ ನೀಡಲಿ ಎಂದು ಹೇಳಿದ್ದರು. ಅವರು ಮಾಡಿದ ಸೇವೆಗಳಿಗೆ ಸಂಬಂಧಿಸಿ ಅನೇಕ ಘಟನೆಗಳಿವೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಮತ್ತು ಖಲೀಫತುಲ್ ಮಸೀಹ್ ರಾಬಿಅ್‌ರವರು ಅವರು ಮಾಡಿದ ಸೇವೆಗಳನ್ನು ಬಹಳ ಪ್ರಶಂಸಿದ್ದರು. ಒಂದು ಪತ್ರದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಹೀಗೆ ಬರೆದಿದ್ದಾರೆ: ಕರಾಚಿಯ ಲಜ್‌ನದ ರಿಪೋರ್ಟ್ ಮತ್ತು ನಿಮ್ಮ ಅತ್ಯಂತ ನಿಷ್ಠಾಪೂರ್ಣವಾದ ಭಾವನೆಗಳ ಬಗ್ಗೆ ಪತ್ರ ತಲಪಿತು. ನಾನು ನಿಮ್ಮ ನಿಷ್ಠಾಪೂರ್ಣ ವಿಧೇಯತೆಯನ್ನು ಹೃತ್ಪೂರ್ವಕವಾಗಿ ಗೌರವ ಭಾವದಿಂದ ಕಾಣುತ್ತೇನೆ. ನಾನು ನನ್ನ ಪ್ರಭುವಿನೊಂದಿಗೆ ಯಾವಾಗಲೂ ನಿಮಗೆ ಒಳಿತು ಉಂಟಾಗಲು ಬೇಡಿಕೊಳ್ಳುತ್ತಾ ಇದ್ದೇನೆ. ನಾನು ಹೀಗೆಯೂ ಬೇಡಿಕೊಳ್ಳುತ್ತಿದ್ದೇನೆ, ನನಗೆ ಪ್ರಿಯವಾದ ಆ ದಿನಗಳು ಇನ್ನಷ್ಟು ವೈಭವದೊಂದಿಗೆ ಮರಳಿ ಬರಲಿ ಎಂದು.

ನಾಲ್ಕು ಹೆಣ್ಣು ಮಕ್ಕಳು ಜನಿಸಿದ ನಂತರ ಅವರಿಗೆ ಪ್ರಥಮ ಪುತ್ರ ಜನಿಸಿದನು. ಆದರೆ ಸ್ವಲ್ಪಕಾಲದ ನಂತರ ಆ ಮಗು ಮೃತವಾಯಿತು. ಆಗ ಅವರು ಬಹಳ ಸಹನೆಯಿಂದ ಹೇಳುತ್ತಿದ್ದರು, ಅವನು ಅಲ್ಲಾಹನ ಅಮಾನತ್ ಆಗಿದ್ದನು, ಅಲ್ಲಾಹನೇ ಅವನನ್ನು ತೆಗೆದುಕೊಂಡು ಹೋದನು. ಅವರು ಪ್ರತಿ ಸಮಯದಲ್ಲಿ ಪ್ರಾರ್ಥಿಸುವವರಾಗಿದ್ದರು. ಅವರ ಮಕ್ಕಳು ಹೇಳುತ್ತಾರೆ: ನಮ್ಮ ತಾಯಿ ನಮಗೆ ಯಾವಾಗಲೂ ಉಪದೇಶ ನೀಡುತ್ತಿದ್ದರು. ಖಲೀಫರ ಜೊತೆ ಆಧ್ಯಾತ್ಮಿಕ ಸಂಬಂಧವನ್ನು ಎಂದೂ ಕೈ ಬಿಡಬಾರದು. ಯಾವಾಗಲೂ ಖಿಲಾಫತ್‌ನೊಂದಿಗೆ ಜೋಡಿಸಿರಬೇಕು ಎಂದು.

ಅವರು ಪರದೆಯನ್ನು ಅತ್ಯಂತ ನಿಷ್ಠೆಯಿಂದ ಪಾಲಿಸುವವರಾಗಿದ್ದರು ಪರದೆಯ ಬಗ್ಗೆ ಬಲಹೀನತೆ ಎಲ್ಲಿಯಾದರೂ ಕಂಡರೆ ಬಹಳ ಉತ್ತಮ ರೀತಿಯಲ್ಲಿ ಯಾರಿಗೂ ನೋವಾಗದಂತೆ ಉಪದೇಶಿಸುತ್ತಿದ್ದರು. ಅಮತುಲ್ ಬಾರಿ ನಾಸಿರ್ ಸಾಹಿಬ ಹೇಳುತ್ತಾರೆ: ಆಪಾ ಸಲೀಮ ಮೀರ್ ಸಾಹಿಬರಿಂದ ಕರಾಚಿಯ ಲಜ್‌ನಕ್ಕೋಸ್ಕರ ದೀರ್ಘಕಾಲ ಸೇವೆಯನ್ನು ಅಲ್ಲಾಹನು ಮಾಡಿಸಿದನು. ಅವರು ಈಗ ಇಹಲೋಕದಲ್ಲಿಲ್ಲ. ಆದರೆ ಅವರಿಂದ ತರಬೇತಿ ಪಡೆದ ಲಜ್‌ನ ಸದಸ್ಯೆಯರು ಲೋಕದ ಮೂಲೆ ಮೂಲೆಗಳಲ್ಲಿ ಲಜ್‌ನಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಮತ್ತು ಅವರ ಹೆಸರನ್ನೂ ಕೆಲಸವನ್ನೂ ಜೀವಂತವಾಗಿರಿಸುತ್ತಿದ್ದಾರೆ. ಕರಾಚಿ ಲಜ್‌ನದ ಸೆಕ್ರಿಟರಿ ಇಶಾಅತ್ ಬರೆಯುತ್ತಾರೆ: 1986ರಿಂದ ಆಪಾ ಸಲೀಮ ಮೀರ್ ಸಾಹಿಬರೊಂದಿಗೆ ಕೆಲಸ ಮಾಡುವ ಸಂದರ್ಭ ಲಭಿಸಿತ್ತು. ಅವರು ಬಡವರನ್ನು ಅತ್ಯಂತ ಸಂರಕ್ಷಿಸುವವರೂ ಮೃದು ಸ್ವಾಭಾವಿಯೂ ಆಗಿದ್ದರು.

ಒಂದು ಸಂದರ್ಭದಲ್ಲಿ ಒಬ್ಬ ಮಹಿಳೆ ಯಾವುದೋ ಕಾರಣದಿಂದ ಕರಾಚಿಯಲ್ಲಿ ಜಮಾಅತ್‌ನಿಂದ ದೂರ ಸರಿದಿದ್ದರು. ಅವರ ಕೈಯಲ್ಲಿ ಜಮಾಅತಿಗೆ ಸಂಬಂಧಿಸಿದ ಕೆಲವು ಅಪೂರ್ವ ಅವಶೇಷಗಳಿದ್ದುವು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರ ಪ್ರಾರ್ಥನೆ ಮತ್ತು ಮಾರ್ಗದರ್ಶನದ ಮೂಲಕ ಸಲೀಮ ಮೀರ್ ಸಾಹಿಬರ ನೇತೃತ್ವದಲ್ಲಿ ಬಹಳ ಉಪಾಯದಿಂದ ಅವರೊಂದಿಗೆ ಸಂಪರ್ಕ ಸ್ಥಾಪಿಸಲಾಯಿತು. ಆ ಮಹಿಳೆ ತೀವ್ರವಾಗಿ ರೋಗ ಬಾಧಿತಳಾಗಿದ್ದ ಕಾರಣ ಅವರಿಂದ ಏನನ್ನಾದರೂ ಪಡೆಯುವ ಮೊದಲೇ ಅವರು ಮೃತರಾದರು. ಆ ಮಹಿಳೆಯ ಒಬ್ಬ ಸಂಬಂಧಿಕನೊಂದಿಗೆ ಹೇಳಲಾಯಿತು– ಮೃತ ಮಹಿಳೆಯ ಕೈಯಲ್ಲಿದ್ದ ಜಮಾಅತಿಗೆ ಸಂಬಂಧಿಸಿದ ಅವಶೇಷಗಳನ್ನು ಕೊಡುವುದಾದರೆ ನಾವು ಅದಕ್ಕೆ ಹಣ ನೀಡಲು ಸಿದ್ಧರಾಗಿದ್ದೇವೆ ಎಂದು. ಒಂದು ಪೆಟ್ಟಿಗೆ ದೊರಕಿತು. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ವಂತ ಕೈ ಅಕ್ಷರದಿಂದ ಬರೆದ ಪತ್ರಗಳಿದ್ದುವು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರು ಬರೆದ ಬರಹಗಳಿದ್ದುವು. ಆ ಪೆಟ್ಟಿಗೆ ಸಹ ಚಾರಿತ್ರಿಕ ಮಹತ್ವದ್ದಾಗಿತ್ತು. ಅದನ್ನು ಸಲೀಮ ಮೀರ್ ಸಾಹಿಬರು ಬಹಳ ಬುದ್ಧಿವಂತಿಕೆಯಿಂದ ಗಳಿಸಿದರು.

ಸಲೀಮ ಮೀರ್ ಸಾಹಿಬರ ಬಗ್ಗೆ ಬರೆದ ಪ್ರತಿಯೊಬ್ಬ ವ್ಯಕ್ತಿ ಹೀಗೆ ಬರೆದಿದ್ದಾರೆ: ಅವರು ಬಹಳ ಘನವಂತೆಯೂ, ಧೈರ್ಯಶಾಲಿಯೂ, ಸಹನೆಯುಳ್ಳವರೂ ಆಗಿದ್ದಾರೆಂದು. ಖಿಲಾಫತ್‌ನೊಂದಿಗೆ ಸಂಬಂಧವಿರುವವರೂ ಅದರ ಬಗ್ಗೆ ಉಪದೇಶಿಸುವವರೂ ಆಗಿದ್ದರು. ಒಳಿತು ಮಾಡುವವರೂ ಒಳಿತನ್ನು ಮಾಡಲು ಉಪದೇಶಿಸುವವರೂ ಆಗಿದ್ದರು. ಅವರು ತಮ್ಮವರಿಗೂ ಅನ್ಯರಿಗೂ ಸದುಪದೇಶ ನೀಡುವವರಾಗಿದ್ದರು. ಅವರಿಗೆ ತವಕ್ಕುಲ್ ಅಲಲ್ಲಾಹ್ (ಅಲ್ಲಾಹನ ಮೇಲೆ ಭರವಸೆ) ಬಹಳ ಇತ್ತು. ಅಲ್ಲಾಹನ ತೃಪ್ತಿಯ ಬಗ್ಗೆ ಯಾವಾಗಲೂ ತೃಪ್ತಳಾಗುವವರಾಗಿದ್ದರು. ಅಲ್ಲಾಹನು ಅವರ ಸ್ಥಾನವನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಪುತ್ರಿಯರಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಅಲ್ಲಾಹನು ಭಾಗ್ಯ ನೀಡಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 30-03-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon